**ಪಾಠ–3** **ಏಪ್ರಿಲ್ 10–16**

# ಮುಂದಿನ ಎಲ್ಲಾ ಸಂತತಿಗಳು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆದಿಕಾಂಡ 3:6, ಆ.ಕಾಂಡ 6:5,11, ಆ.ಕಾಂಡ 6:18, ಆ.ಕಾಂಡ 9:12–17; ಯೆಶಾಯ 4:3, ಪ್ರಕ 12:17.

**ಸ್ಮರಣವಾಕ್ಯ: "ಆದರೆ ನೋಹನಿಗೆ ಯೆಹೋವನ ದಯವು ದೊರಕಿತು"** (ಆ.ಕಾಂಡ 6:8).

ಬ್ಯಾಕ್ಟೀರಿಯಾವು ಒಂದು ಏಕಕೋಶ ಜೀವಿಯಾಗಿದ್ದು ಬರಿಗಣ್ಣಿಗೆ ಕಾಣದಷ್ಟು ಬಹಳ ಸೂಕ್ಷ್ಮವಾಗಿರುತ್ತದೆ. ಇದನ್ನು ಸೂಕ್ಷ್ಮದರ್ಶಕದ ಸಹಾಯದಿಂದ ಸುಮಾರು ಸಾವಿರಪಟ್ಟು ದೊಡ್ಡದು ಮಾಡಿದರೆ ಪೆನ್ಸಿಲ್‌ನ ಮೊನೆಗಿಂತ ಚಿಕ್ಕದಾಗಿ ಕಾಣುತ್ತದೆ. ಸಾಕಷ್ಟು ಬೆಚ್ಚನೆಯ ತೇವಾಂಶವಿರುವ ಹಿತಕರವಾದ ಹವಾಮಾನದಲ್ಲಿ ಬ್ಯಾಕ್ಟೀರಿಯವು ಬಹಳ ಶೀಘ್ರಗತಿಯಲ್ಲಿ ಬಹುಸಂಸ್ಥೆಯಲ್ಲಿ ಬೆಳೆದು ಬಿಡುತ್ತವೆ. ಉದಾಹರಣೆಗೆ ಕೆಲವು ಬ್ಯಾಕ್ಟೀರಿಯಾಗಳು ಸರಳವಾದ ವಿದಳನದಿಂದ (ವಿಭಜನೆಯಿಂದ) ಎರಡು ಮರಿಕೋಶಗಳಾಗುತ್ತವೆ. ಪ್ರತಿಗಂಟೆಗೆ ವಿದಳನವು ನಡೆದು 24 ಗಂಟೆಗಳಲ್ಲಿ ಸುಮಾರು 16 ಮಿಲಿಯನ್ ಬ್ಯಾಕ್ಟೀರಿಯಾಗಳನ್ನು ಉತ್ಪತ್ತಿ ಮಾಡಿಬಿಡುತ್ತದೆ. 48 ಗಂಟೆಗಳ ಬಳಿಕ ಇವುಗಳ ಸಂಖ್ಯೆ ನೂರಾರು ಬಿಲಿಯನ್ ಆಗಿಬಿಡುತ್ತದೆ. ಪ್ರಕೃತಿಯಲ್ಲಿ ಸೂಕ್ಷ್ಮಜೀವಿಗಳಲ್ಲಿ ನಡೆಯುವ ಈ ಪ್ರಕ್ರಿಯೆಯು ಮನುಷ್ಯನು ಬಿದ್ದುಹೋದ ಮೇಲೆ ಕೆಟ್ಟದ್ದು ಎಷ್ಟು ಶೀಘ್ರಗತಿಯಲ್ಲಿ

---

* **ಈ ಪಾಠವನ್ನು ಏಪ್ರಿಲ್ 17ರ ಸಬ್ಬತ್ತಿನ ಸಿದ್ಧತೆಗಾಗಿ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ಬೆಳೆದುಹೋಯಿತು ಎಂಬುದಕ್ಕೆ ನಿದರ್ಶನವಾಗಿದೆ. ಉನ್ನತವಾದ ಆಲೋಚನಾಶಕ್ತಿ (ವಿವೇಚನೆ), ಸದೃಢವಾದ ಶರೀರ, ಬಲಶಾಲಿಯಾದ ಈ ಜನಾಂಗವು ದೇವರನ್ನು ತ್ಯಜಿಸಿಬಿಟ್ಟು ತನಗಿದ್ದ ವಿಶೇಷವಾದ ಸಾಮರ್ಥ್ಯವನ್ನು ಅನೈತಿಕವಾಗಿ ಬಳಸಿ ಎಲ್ಲಾ ವಿಧವಾದ ಅಕ್ರಮಗಳನ್ನೆಸಗಲು ತೊಡಗಿಕೊಂಡಿತು. ಬ್ಯಾಕ್ಟೀರಿಯವನ್ನು ಸೂರ್ಯನ ಶಾಖದಿಂದಲೋ, ರಾಸಾಯನಿಕದಿಂದಲೋ ಅಥವಾ ಹೆಚ್ಚು ಉಷ್ಣತೆಯಿಂದಲೋ ನಾಶಪಡಿಸುವಂತೆ ದೇವರು ತನಗೆ ವಿರೋಧವಾಗಿ ಮಿತಿಮೀರಿನಿಂತ ಮಾನವ ಜನಾಂಗವನ್ನು ತಡೆಯಲು ಇಡೀ ಲೋಕಕ್ಕೆ ಜಲಪ್ರಳಯವನ್ನು ಉಂಟುಮಾಡಿ ನಾಶಪಡಿಸಲು ಉದ್ದೇಶಿಸಿದನು.

ಈ ವಾರದ ಪಾಠದಲ್ಲಿ ಪಾಪವು ದೇವರ ಸೃಷ್ಟಿಗೆ ಏನನ್ನು ಮಾಡಿತು? ನೋಹನ ಕೆಲವು ಗುಣವಿಶೇಷಗಳೇನಾಗಿದ್ದವು? ಯಾವ ರೀತಿಯಲ್ಲಿ ಜಲಪ್ರಳಯಕ್ಕೆ ಮುಂಚೆ ದೇವರು ತನ್ನ ಕೃಪೆಯನ್ನು ನೋಹನೊಂದಿಗೆ ಮಾಡಿಕೊಂಡ ಒಡಂಬಡಿಕೆಯಲ್ಲಿ ತೋರಿಸಿದನು? ಜಲಪ್ರಳಯದ ನಂತರ ದೇವರು ಮಾನವ ಸಂತತಿಯೊಡನೆ ಮಾಡಿಕೊಂಡ ಒಡಂಬಡಿಕೆಯು ನಮ್ಮ ಮೇಲೆ ಇಟ್ಟಿರುವ ಆತನ ಸಾರ್ವಕಾಲಿಕ ಪ್ರೀತಿಯ ಬಗ್ಗೆ ಏನು ಬೋಧಿಸುತ್ತದೆ ಎಂದು ಕಲಿಯುತ್ತೇವೆ.

**ಭಾನುವಾರ** **ಏಪ್ರಿಲ್ 11**

## ಪಾಪದ ನಿಯಮ (ಆದಿಕಾಂಡ 6:5)

ದೇವರು ಸೃಷ್ಟಿಕಾರ್ಯವನ್ನು ಮಾಡಿ ಮುಗಿಸಿದ ಮೇಲೆ ಅದನ್ನು ನೋಡಿ "ಅದು ಬಹು ಒಳ್ಳೆಯದಾಗಿತ್ತು" ಎಂದು ಅಭಿಪ್ರಾಯಪಡುತ್ತಾನೆ (ಆ.ಕಾಂಡ 1:31). ಪಾಪವು ಪ್ರವೇಶಿಸಿದ ನಂತರ ಯಾವುದೂ ಇನ್ನೆಂದಿಗೂ ಒಳ್ಳೆಯದಾಗಿರಲಿಲ್ಲ ಎನ್ನುವ ಮಾದರಿಗೆ ಬದಲಾಯ್ತು. ದೇವರ ಕ್ರಮಬದ್ಧವಾದ ಸೃಷ್ಟಿಯು ಪಾಪದಿಂದಲೂ ಅದರ ಫಲಿತಾಂಶಗಳಿಂದಲೂ ಕೆಟ್ಟುಹೋಯಿತು. ನೋಹನ ಕಾಲ ಬರುವಷ್ಟರಲ್ಲಿ ಪಾಪದ ಪ್ರಮಾಣವು (ಬಂಡುಕೋರತನವೂ) ಮಿತಿಮೀರಿ ಬೆಳೆಯಿತು. ಕೆಟ್ಟತನವು ಮಾನವ ಕುಲವನ್ನು ನಾಶಮಾಡತೊಡಗಿತು. ಸತ್ಯವೇದದಲ್ಲಿ ಇದರ ವಿವರಣೆ ಸಾಕಷ್ಟಿಲ್ಲ (ಶ್ರೀಮತಿ ಎಲೆನ್ ಜಿ ವೈಟಮ್ಮನವರ "ನಮ್ಮ ಪೂರ್ವ ಪಿತೃಗಳು ಮತ್ತು ಪ್ರವಾದಿಗಳು" ಎಂಬ ಪುಸ್ತಕದ ಪುಟ 90–92ರಲ್ಲಿ ಓದಿರಿ). ದೀರ್ಘಶಾಂತನೂ ಮಹಾಪ್ರೀತಿಯುಳ್ಳವನೂ ದಯಾಮಯನೂ

ಆದ ದೇವರು ಸಹಾ ಸಹಿಸಿಕೊಳ್ಳಲಾಗದಷ್ಟು ಮಟ್ಟಿಗೆ ಮನುಷ್ಯನ ಉಲ್ಲಂಘನೆಗಳು ಮತ್ತು ಬಂಡಾಯವು ತಲುಪಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಅಷ್ಟು ತ್ವರಿತಗತಿಯಲ್ಲಿ ಲೋಕವು ಕೆಟ್ಟತನದಿಂದ ಹೇಗೆ ತುಂಬಿಹೋಯ್ತು? ಇದಕ್ಕೆ ಉತ್ತರವನ್ನು ಕಂಡುಕೊಳ್ಳುವುದು ಕಷ್ಟವೇನಲ್ಲ. ಇಂದಿನ ದಿನಗಳಲ್ಲೂ ಎಷ್ಟೋ ಜನರು ತಮ್ಮ ಪಾಪದ ಜೀವನವನ್ನು ಕುರಿತು "ಅಯ್ಯೋ ಲೋಕವು ಹೇಗೆ ಇಷ್ಟು ಬೇಗನೆ ಕೆಟ್ಟು ಹೋಯಿತು ಎಂಬುದಾಗಿ ಕೇಳುತ್ತಾರಲ್ಲವೇ?"

ಕೆಳಗೆ ಪಟ್ಟಿ ಮಾಡಿದ ಸತ್ಯವೇದದ ವಚನಗಳನ್ನು ನೋಡೋಣ. ಅವುಗಳು ತಿಳಿಸುವ ಅಂಶಗಳನ್ನು ಬರೆಯುತ್ತಾ ಹೋದಂತೆ ಪಾಪವು ಹೇಗೆ ಒಂದೇ ಸಮನೆ ಹೆಚ್ಚುತ್ತಾ ಹೋಗುತ್ತದೆ ಎಂಬುದನ್ನು ಗಮನಿಸೋಣ:

ಆದಿಕಾಂಡ 3:6
ಆದಿಕಾಂದ 3:11–13
ಆದಿಕಾಂಡ 4:5
ಆದಿಕಾಂಡ 4:8
ಆದಿಕಾಂಡ 4:19
ಆದಿಕಾಂಡ 4:23
ಆದಿಕಾಂಡ 6:2
ಆದಿಕಾಂಡ 6:5–11

ಆದಿಕಾಂಡ 6:5 ಮತ್ತು 6:11ನೇ ವಚನಗಳಲ್ಲಿ ಅನ್ಯಾಯವು ಲೋಕವನ್ನು ತುಂಬಿಕೊಂಡಿತ್ತು..... ಭೂನಿವಾಸಿಗಳೆಲ್ಲರೂ ತಮ್ಮ ನಡವಳಿಕೆಯನ್ನು ಕೆಡಿಸಿಕೊಂಡಿದ್ದರು ಎಂಬುದಾಗಿ ನೋಡುತ್ತೇವೆ. ಜನರು ಒಮ್ಮೆಲೆ ಇಂತಹ ಹೀನಸ್ಥಿತಿಗೆ ಬರಲಿಲ್ಲ. ಇದರ ಹಿಂದೆ ಇತಿಹಾಸವಿದೆ. ಈ ವೈಪರಿತ್ಯವು ಅದರಷ್ಟಕ್ಕೆ ಅದೇ ಘಟಿಸಲಿಲ್ಲ. ಈ ಘೋರವಾದ ಫಲಿತಾಂಶಗಳ ಹಿಂದೆ ಒಂದು ಕಾರಣವಿತ್ತು. ಪಾಪವು ಕ್ರಮೇಣವಾಗಿ ಬೆಳೆದು ಧಾರುಣ ಸ್ಥಿತಿಗೆ ತಲುಪಿತು. ಪಾಪವು ಸಹಜವಾಗಿ ಅಂತಹ ಸ್ಥಿತಿಗೆ ತಲುಪುವ ಗುಣ ಹೊಂದಿದೆ. ಪಾಪವು ಕೊಯ್ದು ಅಥವಾ ಗೀರಿದ ಗಾಯದಂತೆ ತನ್ನಷ್ಟಕ್ಕೆ ತಾನೇ ವಾಸಿಯಾಗುವಂಥದ್ದಲ್ಲ. ಇದಕ್ಕೆ

ವ್ಯತಿರಿಕ್ತವಾಗಿ ಪಾಪವು ಮಿತಿ ಮೀರುವಂಥದ್ದು, ನಾಶಕ್ಕೂ ಮರಣಕ್ಕೂ ಗುರಿಯಾಗುವವರೆಗೂ ಉಲ್ಬಣವಾಗುತ್ತಲೇ ಹೋಗುತ್ತದೆ. ಪಾಪವು ಹೇಗೆ ಪ್ರವರ್ತಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಳಯಕ್ಕಿಂತ ಮೊದಲಿದ್ದ ಪರಿಸ್ಥಿತಿಯನ್ನು ಕಲ್ಪನೆ ಮಾಡಿಕೊಳ್ಳುವ ಅಗತ್ಯವಿಲ್ಲ. ಯಾಕೆಂದರೆ ಪಾಪವು ಇಂದಿಗೂ ಸಹ ನಮ್ಮ ಸುತ್ತಲೂ ಎಲ್ಲಾ ಕಡೆಯಲ್ಲೂ ವ್ಯಾಪಿಸಿಕೊಂಡಿದೆ. ದೇವರು ಪಾಪವನ್ನು ದ್ವೇಷಿಸುತ್ತಾನೆಂಬುದು ಆಶ್ಚರ್ಯಕರವಾದುದ್ದೇನಲ್ಲ. ಈಗಲೋ ಅಥವಾ ನಂತರವೋ ಪಾಪವು ನಾಶವಾಗುವುದಕ್ಕಿದೆ. ಪ್ರೀತಿಮಯನೂ ನ್ಯಾಯಪರನೂ ಆದ ದೇವರು ಪಾಪವನ್ನುಳಿಸಿಕೊಂಡು ಏನನ್ನೂ ಮಾಡುವುದಿಲ್ಲ.

ಶುಭಸಮಾಚಾರವೇನೆಂದರೆ ದೇವರು ಖಂಡಿತವಾಗಿಯೂ ಪಾಪವನ್ನು ತೆಗೆದುಹಾಕುತ್ತಾನಾದರೋ ಆತನು ಪಾಪಿಗಳನ್ನು ರಕ್ಷಿಸುತ್ತಾನೆ. ಒಡಂಬಡಿಕೆಯು ಅದನ್ನು ತಾನೇ ಕುರಿತು ಹೇಳುತ್ತದೆ.

**ಸೋಮವಾರ** **ಏಪ್ರಿಲ್ 12**

## ಮನುಷ್ಯನಾದ ನೋಹನು (ಆದಿಕಾಂಡ 6:9)

ಲೋಕದಲ್ಲಿ ಜಲಪ್ರಳಯ ಆಗುವುದಕ್ಕಿಂತ ಮುಂಚೆ ಇದ್ದ ಕೆಟ್ಟ ಪರಿಸ್ಥಿತಿಯ ಬಗ್ಗೆ ಹೇಳುವ ಎಲ್ಲಾ ವಚನಗಳ ಮಧ್ಯೆ ನೋಹನು ಮಾತ್ರ ತನ್ನ ಸುತ್ತಲೂ ಇದ್ದವರಿಗಿಂತ ವಿಭಿನ್ನವಾದ ವ್ಯಕ್ತಿಯಾಗಿದ್ದನು. ಮೇಲೆ ಹೇಳಿರುವ ವಚನವನ್ನು ನೋಡಿದಾಗ ನೋಹನ ಬಗ್ಗೆ ಮೂರು ನಿರ್ದಿಷ್ಟವಾದ ಅಂಶಗಳು ತಿಳಿದುಬರುತ್ತವೆ. ನಿಮ್ಮ ಉತ್ತಮವಾದ ತಿಳುವಳಿಕೆಗನುಗುಣವಾಗಿ ಈ ಮೂರು ಅಂಶಗಳ ಬಗ್ಗೆ ನೀವು ಆಲೋಚಿಸುವುದನ್ನು ಕೆಳಗೆ ಬರೆಯಿರಿ:

1. ಆತನು ನೀತಿವಂತನಾಗಿದ್ದನು
2. ಆತನು ದೋಷವಿಲ್ಲದವನಾಗಿದ್ದನು (ತಪ್ಪಿಲ್ಲದವನಾಗಿದ್ದನು)
3. ಆತನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು.

ನೋಹನು ದೇವರ ಜೊತೆ ಉತ್ತಮವಾದ ಸಂಬಂಧ ಹೊಂದಿದ್ದವನಾಗಿದ್ದನು ಎಂಬುದಕ್ಕೆ ಯಾವುದೇ ಪ್ರಶ್ನೆಯೇ ಇರಲಿಲ್ಲ. ಆತನು ದೇವರ ಮಾತನ್ನು ಕೇಳಿಸಿಕೊಳ್ಳುವವನೂ ವಿಧೇಯನೂ ಮತ್ತು ಆತನಲ್ಲಿ ನಂಬಿಕೆಯಿಟ್ಟವನೂ

ಆಗಿದ್ದುದರಿಂದ ದೇವರು ತನ್ನ ಕಾರ್ಯವನ್ನು ಅವನ ಮೂಲಕ ಮಾಡಿಸಲು ಉಪಯುಕ್ತನಾಗಿದ್ದನು. ಆದುದರಿಂದ ದೇವರು ತನ್ನ ಉದ್ದೇಶವನ್ನು ನೆರವೇರಿಸಲು ನೋಹನನ್ನು ಬಳಸಿಕೊಂಡನು ಮತ್ತು ಹೊಸ ಒಡಂಬಡಿಕೆ 22 ಪೇತ್ರ 2:5ನೇ ವಚನದಲ್ಲಿ ಪೇತ್ರನು ಅವನನ್ನು "ಸುನೀತಿಯನ್ನು ಸಾರುವವನಾಗಿದ್ದನು" ಎಂದು ಬರೆಯುತ್ತಾನೆ.

ಆದಿಕಾಂಡ 6:8ನ್ನು ಓದಿರಿ. ಈ ವಚನವು ನೋಹ ಮತ್ತು ದೇವರ ನಡುವೆ ಇದ್ದ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಹೇಗೆ ಸಹಾಯಮಾಡುತ್ತದೆ?

ಸತ್ಯವೇದದಲ್ಲಿ ಮೊಟ್ಟಮೊದಲಿಗೆ ಕೃಪೆ (ದಯೆ) ಎಂಬ ಪದವು ಸಿಗುತ್ತದೆ. ಇದರ ಅರ್ಥವು ಹೊಸ ಒಡಂಬಡಿಕೆಯಲ್ಲಿ ಉಲ್ಲೇಖವಾಗಿರುವ ಕೃಪೆಗೆ ಸಮಾನವಾದ ಅರ್ಥವನ್ನೇ ಹೊಂದಿದುದಾಗಿದೆ. ಯಾವ ಪುಣ್ಯಕಾರ್ಯವನ್ನೂ ಮಾಡದ ಅಯೋಗ್ಯನಾದ ಪಾಪಿಯ ಮೇಲೆ ತೋರುವ ಅಪಾರವಾದ ದೇವರ ಕರುಣೆಯನ್ನು ಕೃಪೆ ಎಂದು ವಿವರಿಸಬಹುದಾಗಿದೆ. ಹಾಗಾಗಿ ನೋಹನು ಎಷ್ಟೇ ನೀತಿವಂತನಾಗಿದ್ದರೂ ತಪ್ಪಿಲ್ಲದವನಾಗಿದ್ದಾಗ್ಯೂ ಆತನು ಪಾಪಿಯೇ ಆಗಿದುದರಿಂದ ದೇವರು ಅಪಾತ್ರರಿಗೆ ತೋರಿಸುವ ದಯೆ (ಕರುಣೆ) ಅಂದರೆ ಕೃಪೆ ಆತನಿಗೂ ಅಗತ್ಯವಾಗಿತ್ತು. ಈ ಒಂದು ಅರ್ಥದಲ್ಲಿ ನೋಡುವುದಾದರೆ ದೇವರನ್ನು ಶ್ರದ್ಧೆಯಿಂದ ಹುಡುಕುವವನಾಗಿ ಆತನನ್ನು ಹಿಂಬಾಲಿಸುವ ನಮಗಿಂತ ನೋಹನು ಭಿನ್ನವಾಗಿರಲಿಲ್ಲ ಎಂಬುದು ತಿಳಿಯುತ್ತದೆ.

ನೋಹನಿಗೂ ನಮ್ಮ ಹಾಗೆಯೇ ದೇವರ ಕೃಪೆಯು ಅಗತ್ಯವಿತ್ತು ಎಂದು ಅರ್ಥಮಾಡಿಕೊಂಡು ನಾವು ನಮ್ಮ ಸ್ವಂತ ಜೀವಿತವನ್ನು ತಿಳಿದವನಾಗಿ ನೋಹನ ಬಗ್ಗೆ ನೀತಿವಂತನಾಗಿದ್ದನು, ತಪ್ಪಿಲ್ಲದವನಾಗಿದ್ದನು, ದೇವರ ಜೊತೆ ಅನ್ಯೋನ್ಯವಾಗಿ ನಡೆದುಕೊಂಡನು ಎಂಬುದಾಗಿ ಹೇಳಿರುವಂತೆಯೇ ನನ್ನ ವಿಷಯವಾಗಿಯೂ ಹೇಳುವಂತೆ ನಾನು ಇದ್ದೇನೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಿರಿ. ನೀವು ಯಾವುದೇ ಸ್ಥಿತಿಯಲ್ಲಿದ್ದರೂ (ಯಾವುದೇ ಮುಜುಗುರವಿಲ್ಲದಿದ್ದರೆ) ಸಬ್ಬತ್ತಿನ ತರಗತಿಯಲ್ಲಿ ಹಂಚಿಕೊಳ್ಳಿರಿ.

ಮಂಗಳವಾರ ಏಪ್ರಿಲ್ 13

## ನೋಹನ ಜೊತೆ ಮಾಡಿಕೊಂಡ ಒಡಂಬಡಿಕೆ

"ಆದರೆ ನಿನ್ನ ಕೂಡ ನನ್ನ ನಿಬಂಧನೆಯನ್ನು ಮಾಡುತ್ತೇನೆ. ನೀನು ಹೆಂಡತಿ ಮಕ್ಕಳು, ಸೊಸೆಯರು ಸಹಿತವಾಗಿ ನಾವೆಯಲ್ಲಿ ಸೇರಬೇಕು" (ಆದಿಕಾಂಡ 6:18).

ಈ ಒಂದು ವಚನದಲ್ಲಿ ದೇವರಿಗೂ ಮಾನವನಿಗೂ ನಡುವೆ ನಡೆದ ಸತ್ಯವೇದಾನುಸಾರವಾದ ಒಡಂಬಡಿಕೆಯ ಮೂಲಾಂಶಗಳಿವೆ: ದೇವರು ಮತ್ತು ಮಾನವನು ಬಹಳ ಸರಳವಾದ ಒಂದು ಒಪ್ಪಂದಕ್ಕೆ ಪ್ರವೇಶಿಸಿದರು, ಆದಾಗ್ಯೂ, ಮೊದಲ ಸಲಕ್ಕೆ ಕಣ್ಣಿಗೆ ಬಿದ್ದುದಕ್ಕಿಂತ ಹೆಚ್ಚಿನ ಅಂಶಗಳು ಇದರಲ್ಲಿವೆ. ಒಡಂಬಡಿಕೆಯ ಅನುಸಾರ ಮೊದಲಿಗೆ ಮನುಷ್ಯನು ತನ್ನ ಕರ್ತವ್ಯವಾಗಿ ವಿಧೇಯತ್ವವನ್ನು ತೋರಿಸುವ ಅಂಶವು ಬರುತ್ತದೆ. ದೇವರು ನೋಹನಿಗೆ "ನೀನು ಹೆಂಡತಿ ಮಕ್ಕಳು ಸೊಸೆಯರ ಸಹಿತವಾಗಿ ನಾವೆಯಲ್ಲಿ ಸೇರಬೇಕಾಗಿತ್ತು. ಒಂದೊಮ್ಮೆ ಅವನು ಹಾಗೆ ಮಾಡಿರದಿದ್ದರೆ ಒಡಂಬಡಿಕೆಯು ಮುರಿದುಬೀಳುತ್ತಿತ್ತು. ಒಡಂಬಡಿಕೆ ಮುರಿದುಬಿದ್ದಾಗ ಅಂತಿಮವಾಗಿ ನಷ್ಟ ಹೊಂದಿತ್ತಿದ್ದವನು ಮನುಷ್ಯನೇ ಆಗಿರುತ್ತಿದ್ದನು. ಯಾಕೆಂದರೆ ಆ ಒಡಂಬಡಿಕೆಯನುಸಾರ ನಡೆವಾಗ ಕಡೆಯಲ್ಲಿ ಮನುಷ್ಯನೇ ಅದರ ಫಲಾನುಭವಿಯಾಗಿದ್ದನು. ಇವೆಲ್ಲವುಗಳಿಗಿಂತ ಅಂತಿಮವಾಗಿ ಹೇಳುವುದಾದರೆ ಒಂದುವೇಳೆ ನೋಹನು ದೇವರ ಮಾತಿಗೆ ಅಲ್ಲವೆಂದು ಹೇಳಿ ಒಡಂಬಡಿಕೆಯನ್ನು ಪಾಲಿಸದೆ ಹೋಗಿದ್ದರೆ ಅಥವಾ ಮೊದಲು ಹೌದು ಎಂಬುದಾಗಿ ಹೇಳಿ ನಂತರ ತನ್ನ ಮನಸ್ಸನ್ನು ಬದಲಾಯಿಸಿಕೊಂಡಿದ್ದರೆ ಅವನು ಮತ್ತು ಅವನ ಕುಟುಂಬದ ಗತಿ ಏನಾಗುತ್ತಿತ್ತು?

ದೇವರು ಇದು "ನನ್ನ ಒಡಂಬಡಿಕೆ" ಎಂದು ಹೇಳುತ್ತಾನೆ. ಇದು ಒಡಂಬಡಿಕೆಯ ಮೂಲಸ್ವಭಾವದ ಬಗ್ಗೆ ಏನನ್ನು ಹೇಳುತ್ತದೆ? ದೇವರು ಇದನ್ನು "ನಮ್ಮ ಒಡಂಬಡಿಕೆ" ಎಂದು ಕರೆದಿದ್ದರೆ ಒಡಂಬಡಿಕೆಯುಲ್ಲಿ ನಮ್ಮ ಸಂಕಲ್ಪಗನುಗುಣವಾಗಿ ಎಂತಹ ವ್ಯತ್ಯಾಸವಿರುತ್ತಿತ್ತು?

ಈ ಒಂದು ಸನ್ನಿವೇಶವು ಎಷ್ಟೇ ವಿಶಿಷ್ಟವಾದುದಾಗಿದ್ದರೂ ಇಲ್ಲಿ ದೇವಮಾನವ

ಕಾರ್ಯಶೀಲತೆಯ ಮೂಲವನ್ನು ಒಡಂಬಡಿಕೆಯಲ್ಲಿ ಕಾಣುತ್ತೇವೆ. ನೋಹನ ಜೊತೆ ದೇವರು "ನನ್ನ ಒಡಂಬಡಿಕೆಯನ್ನು ಸ್ಥಾಪಿಸುವುದರ ಮೂಲಕ ತನ್ನ ಕೃಪೆಯನ್ನು ಮತ್ತೆ ತೋರ್ಪಡಿಸಿದ್ದಾನೆ. ಮನುಷ್ಯರನ್ನು ಅವರ ಪಾಪಗಳ ಫಲಿತಾಂಶದಿಂದ ರಕ್ಷಿಸುವ ಸಲುವಾಗಿ ತಾನೇ ಮೊದಲ ಹೆಜ್ಜೆಯನ್ನು ಇಡಮನಸ್ಸುಳ್ಳವನೆಂದು ತೋರಿಸಿದ್ದಾನೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಒಡಂಬಡಿಕೆಯಲ್ಲಿ ಭಾಗಿಯಾಗಿರುವ ಈರ್ವರೂ ಸಮಾನವಾದ ರೀತಿಯಲ್ಲಿ "ಒಂದಾಗಿದ್ದಾರೆಂದು ಇದು ಪರಸ್ಪರ ಪ್ರತಿಯೊಬ್ಬರ ಮೇಲೆ ಆತುಕೊಂಡಿದೆ ಎಂದು ಅಂದುಕೊಳ್ಳಬಾರದು. ಅಂದರೆ ಈ ಒಡಂಬಡಿಕೆಯ ಉದ್ದೇಶವು ಸಫಲವಾಗುವಲ್ಲಿ ಇದರ ಪಾಲುಗಾರನಾದ ಮನುಷ್ಯನೂ ಸಹ ದೇವರಿಗೆ ಸಮಾನವಾದ ಪಾತ್ರವನ್ನು ವಹಿಸಿದ್ದಾನೆಂದು ತಿಳಿಯಬಾರದು. ದೇವರು ಸಹಾ ಈ ಒಡಂಬಡಿಕೆಯಿಂದ ಪ್ರಯೋಜನ ಪಡೆದುಕೊಂಡಿದ್ದಾನೆಂದು ನಾವು ಹೇಳಬಹುದಾಗಿದ್ದರೂ ಮೂಲತಃ ಮನುಷ್ಯನಿಗಿಂತ ಭಿನ್ನವಾದ ರೀತಿಯಲ್ಲಿ ಪಡೆದುಕೊಂಡಿದ್ದಾನೆ. ತಾನು ಪ್ರೀತಿಸುವವರಿಗೆ ನಿತ್ಯಜೀವವು ದೊರಕುವುದರಿಂದ ಸಿಗುವ ತೃಪ್ತಿಯೇ ದೇವರಿಗೆ ಆಗುವ ಪ್ರಯೋಜನವಾಗಿದೆ (ಯೆಶಾಯ 53:11). ಅಂದರೆ ಒಡಂಬಡಿಕೆಯು ಮನುಷ್ಯನಿಗೆ ನಿತ್ಯಜೀವ ಹೊಂದಿಕೊಳ್ಳುವ ಅವಕಾಶವನ್ನು ಕೊಡುವುದರಿಂದ ಮನುಷ್ಯನಂತೆಯೇ ದೆವರು ಸದಾ ಪ್ರಯೋಜನ ಪಡೆಯುತ್ತಾನೆ ಎಂದು ಹೇಳಲಾಗದು. ಈ ಒಂದು ಸಾಮ್ಯದ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ: ಒಬ್ಬ ಮನುಷ್ಯನು ಬಿರುಗಾಳಿಯ ಬಡಿತಕ್ಕೆ ಸಿಲುಕಿದ ದೋಣಿಯ ಮೇಲಿನಿಂದ ನೀರಿಗೆ ಬಿದ್ದು ಬಿಟ್ಟಿದ್ದಾನೆ. ದೋಣಿಯ ಮೇಲಿರುವ ಮತ್ತೊಬ್ಬನು ಜೀವರಕ್ಷಕ ಹಗ್ಗವನ್ನು ಎಸೆಯುತ್ತೇನೆ. ನೀನು ಅದನ್ನು ಹಿಡಿದುಕೋ. ನಾನು ನಿನ್ನನ್ನು ಮೇಲಕ್ಕೆ ಎಳೆದುಕೊಳ್ಳುತ್ತೇನೆ ಎಂದು ಹೇಳುತ್ತಾನೆ. ನೀರಿನಲ್ಲಿ ಮುಳುಗುತ್ತಿರುವವನು ಅದಕ್ಕೆ ಒಪ್ಪಬೇಕು. ಅವನಿಗೆ ಎಸೆದ ಹಗ್ಗವನ್ನು ಹಿಡಿದುಕೊಳ್ಳಬೇಕು. ಅನೇಕ ರೀತಿಯಲ್ಲಿ ದೇವರು ಮತ್ತು ಮನುಷ್ಯನ ನಡುವೆ ಒಡಂಬಡಿಕೆಯು ಪೂರ್ಣವಾಗಿ ಇದನ್ನೇ ಹೋಲುತ್ತದೆ.

ಮೇಲೆ ಹೇಳಿರುವ ಸಾಮ್ಯವು ಒಡಂಬಡಿಕೆಯಲ್ಲಿ ಕಾಣುವಾಗ ಕೃಪೆಯ ಬಗ್ಗೆ ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತದೆ? ಈಗಲೂ ಸಹ

ದೇವರೊಂದಿಗಿನ ನಮ್ಮ ಸಂಬಂಧವು ಅದರ ಮೇಲೆಯೇ ಆಧಾರಗೊಂಡಿದೆ ಎಂದು ಅರ್ಥಮಾಡಿಕೊಳ್ಳಲು ಇದು ಹೇಗೆ ಸಹಾಯ ಮಾಡುತ್ತದೆ?

**ಬುಧವಾರ** **ಏಪ್ರಿಲ್ 14**

## ಮುಗಿಲು ಬಿಲ್ಲಿನ ಗುರುತು

"ನಾನು ನಿಮ್ಮನ್ನು ನಿಮ್ಮ ಸಂಗಡವಿರುವ ಸಮಸ್ತ ಜೀವರಾಶಿಗಳನ್ನು ಕುರಿತು ಎಲ್ಲಾ ತಲತಲಾಂತರಗಳಲ್ಲಿಯೂ ಮಾಡುವ ಈ ಪ್ರತಿಜ್ಞೆಗೆ ಮೇಘಗಳಲ್ಲಿ ನಾನಿಟ್ಟಿರುವ ಮುಗಿಲಿನಬಿಲ್ಲೇ ಗುರುತಾಗಿರುವುದು. ನನಗೂ ಭೂಪ್ರಾಣಿಗಳಿಗೂ ಆದ ಒಡಂಬಡಿಕೆಗೆ ಇದೇ ಗುರುತಾಗಿರಲಿ" (ಆದಿಕಾಂಡ 9:12,13).

ಕೆಲವು ಪ್ರಾಕೃತಿಕ ವಿದ್ಯಮಾನಗಳು ಮುಗಿಲುಬಿಲ್ಲಿಗಿಂತಲೂ ಹೆಚ್ಚು ಸುಂದರವಾಗಿರುತ್ತವೆ. ಮಗುವಾಗಿರುವಾಗ ಆಕಾಶದಲ್ಲಿ ಬಣ್ಣಬಣ್ಣದ ಬೆಳಕಿನ ಪಟ್ಟೆಗಳು ಮೋಡದ ನಾಡಿನ ಬಾಗಿಲಿಗೆ ಕಮಾನ ಕಟ್ಟಿದಂತೆ ಕಾಣುವ ಮುಗಿಲು ಬಿಲ್ಲನ್ನು ನೋಡಿ ಸಂತೋಷಪಟ್ಟಿದ್ದನ್ನು ಯಾರಿಗೆ ತಾನೇ ನೆನಪಾಗುವುದಿಲ್ಲ. ದೊಡ್ಡವರಾದ ನಾವು ಸಹಾ ಏಳು ಬಣ್ಣದ ಮುಗಿಲು ಬಿಲ್ಲನ್ನು ನೋಡಿ ವಿಸ್ಮಿತರಾಗುತ್ತೇವೆ. ಈಗಲೂ ಸಹಾ ಮುಗಿಲುಬಿಲ್ಲು ಅನೇಕ ವಸ್ತುಗಳಿಗೆ ಸಂಕೇತವಾಗಿ ಉಪಯೋಗಿಸುತ್ತೇವೆ. ರಾಜಕೀಯ ಸಂಘಟನೆಗಳಿಂದ ಹಿಡಿದು ಸಂಗೀತ ಗೋಷ್ಠಿಗಳವರೆಗೂ ಉಪಯೋಗಿಸುತ್ತೇವೆ (ಮುಗಿಲುಬಿಲ್ಲು ಎಂಬ ಪದವನ್ನು ಇಂಟರ್ನೆಟ್‌ನಲ್ಲಿ ಹಾಕಿ ನೋಡಿರಿ) ಮುಗಿಲಿನಲ್ಲಿ ಮೂಡುವ ಏಳುಬಣ್ಣದ ಕಮಾನು ಈಗಲೂ ನಮ್ಮ ಹೃದಯವನ್ನು, ಮನಸ್ಸನ್ನು ಮುದಗೊಳಿಸುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಹೌದು, ಅವಶ್ಯವಾಗಿ ಇದು ದೇವರ ಪರಿಪೂರ್ಣ ಉದ್ದೇಶವಾಗಿತ್ತು.

ದೇವರು ಮುಗಿಲುಬಿಲ್ಲು ಯಾವುದಕ್ಕೆ ಗುರುತಾಗಿದೆ ಎಂದು ಹೇಳುತ್ತಾನೆ? (ಆದಿಕಾಂಡ 9:12–17)ನ್ನು ನೋಡಿರಿ.

ದೇವರು ಮುಗಿಲುಬಿಲ್ಲು "ನನ್ನ ಒಡಂಬಡಿಕೆ" ಎಂಬುದಕ್ಕೆ ಗುರುತಾಗಿ ಉಪಯೋಗಿಸುತ್ತೇನೆಂದು ಹೇಳಿದನು. ಇಲ್ಲಿ ಒಡಂಬಡಿಕೆ ಎಂಬ ಪದವು ಉಪಯೋಗವಾಗಿರುವುದು ಬಹಳ ಆಸಕ್ತಿಕರವಾಗಿದೆ. ಯಾಕೆಂದರೆ ಇಲ್ಲಿ

ಒಡಂಬಡಿಕೆಯು ಇತರೆ ಸ್ಥಳಗಳಲ್ಲಿ ಉಪಯೋಗಿಸಿರುವುದಕ್ಕಿಂತ ಭಿನ್ನವಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟಿದೆ. ಅಬ್ರಹಾಮನ ಜೊತೆ ಮಾಡಿಕೊಂಡ ಒಡಂಬಡಿಕೆ ಅಥವಾ ಸಿನಾಯಿ ಬೆಟ್ಟದಲ್ಲಿ ಮಾಡಿಕೊಂಡ ಒಡಂಬಡಿಕೆ ವ್ಯತಿರಿಕ್ತವಾಗಿದ್ದು ಇದರಿಂದ ಪ್ರಯೋಜನ ಪಡೆದುಕೊಳ್ಳುವವರು ಯಾವುದೇ ಬೆಲೆಯನ್ನು ತರಬೇಕಾಗಿಲ್ಲ ಅಂದರೆ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗಿಲ್ಲ. ಇಲ್ಲಿ ದೇವರು ಎಲ್ಲಾ ಜೀವರಾಶಿಯನ್ನು ಕುರಿತು ಹೇಳುತ್ತಾನೆ (ಆದಿಕಾಂಡ 9:15). ಮುಂದಿನ ಎಲ್ಲಾ ತಲತಲಾಂತರವನ್ನು (ಪೀಳಿಗೆಯನ್ನು) ಕುರಿತು ಹೇಳುತ್ತಾನೆ (ಆದಿಕಾಂಡ 9:12). ದೇವರ ಮಾತುಗಳು ಸರ್ವಜನಾಂಗಕ್ಕೂ ಅನ್ವಯವಾಗುತ್ತದೆ. ಈ ಒಂದು ಅರ್ಥದಲ್ಲಿ ದೇವರ ಮತ್ತು ಮನುಷ್ಯರ ನಡುವಿನ ಸಂಬಂಧವನ್ನು ಕುರಿತು ಮಾತಾಡುವಾಗ ಇಲ್ಲಿ ಏರ್ಪಟ್ಟ ಒಡಂಬಡಿಕೆಯ ಪರಿಕಲ್ಪನೆ ಬೇರೆ ಯಾವ ಒಡಂಬಡಿಕೆಯಲ್ಲೂ ಕಾಣುವುದಿಲ್ಲ.

ಈ ಒಡಂಬಡಿಕೆಯಲ್ಲೂ ಸಹ ದೇವರಕೃಪೆ ಯಾವ ರೀತಿಯಲ್ಲಿ ಪ್ರಕಟವಾಗಿದೆ? ಈ ಒಡಂಬಡಿಕೆ ಮಾಡಿಕೊಳ್ಳಲು ಮೊದಲು ಮುಂದಾದವರು ಯಾರು? ಅಂತಿಮವಾಗಿ ಇದರಿಂದ ಪ್ರಯೋಜನ ಪಡೆದುಕೊಂಡವರು (ಫಲಾನುಭವಿಗಳು) ಯಾರು?

ಇಲ್ಲಿ ವ್ಯಕ್ತವಾದಂತೆ ಈ ಒಡಂಬಡಿಕೆಯು ಮನುಷ್ಯರಾದ ನಮ್ಮ ಮೇಲೆ ಯಾವುದೇ ನಿರ್ದಿಷ್ಟವಾದ ಕರ್ತವ್ಯವನ್ನು ಹೊರಿಸದಿದ್ದಾಗ್ಯೂ ಮುಗಿಲುಬಿಲ್ಲಿನ ವಿಷಯವಾಗಿ ನಮಗಿರುವ ಅರಿವು ಹೇಗೆ ನಮ್ಮನ್ನು ದೇವರಿಗೆ ವಿಧೇಯರಾಗಲು ಪ್ರಭಾವಿಸುತ್ತದೆ? (ದೇವರು ಒಡಂಬಡಿಕೆಯ ಅನುಸಾರ ಅವರಿಗಿರುವ ಹಕ್ಕಿನಂತೆ ಈ ಲೋಕವನ್ನು ಸಂಪೂರ್ಣವಾಗಿ ಎಂದೆಂದಿಗೂ ಜಲಪ್ರಳಯದಿಂದ ನಾಶಮಾಡಲಿಲ್ಲ). ಸಂಕ್ಷಿಪ್ತವಾಗಿ ಹೇಳುವುದಾದರೆ ನಾವು ಆಕಾಶದಲ್ಲಿ ಮುಗಿಲುಬಿಲ್ಲನ್ನು ನೋಡಿದಾಗಲೆಲ್ಲಾ ಅದು ಮನುಷ್ಯರಾದ ನಮಗೆ ಯಾವುದಾದರೂ ಕರ್ತವ್ಯಪಾಲನೆಯು ಹಂಗಿನಲ್ಲಿದ್ದೇವೆ ಎಂದು ಸೂಚಿಸುತ್ತದೆಯೇ? ಮುಗಿಲುಬಿಲ್ಲು ಕೊಡಲ್ಪಟ್ಟ ಇಡೀ ಸಂದರ್ಭದ ಬಗ್ಗೆ ಮತ್ತು ಅದರಿಂದ ಕಲಿಯಬಹುದಾದ ಪಾಠದ ಬಗ್ಗೆ ಆಲೋಚಿಸಿರಿ.

**ಗುರುವಾರ** **ಏಪ್ರಿಲ್ 15**

# ನೋಹನು ಮಾತ್ರ ಬದುಕುಳಿದನು

ಮನುಷ್ಯರು ಮೊದಲುಗೊಂಡು ಪಶುಪಕ್ಷಿ ಕ್ರಿಮಿಗಳವರೆಗೂ ಭೂಮಿಯ ಮೇಲಿದ್ದದ್ದೆಲ್ಲಾ ನಾಶವಾಯಿತು; ಅವು ಭೂಮಿಯ ಮೇಲಿಂದ ಲಯವಾಗಿ ಹೋದವು. ನೋಹನೂ ಅದರೊಂದಿಗೆ ನಾವೆಯಲ್ಲಿದ್ದ ಜೀವಿಗಳು ಮಾತ್ರ ಉಳಿದರು (ಆ.ಕಾಂಡ 7:23).

ಈ ವಚನಭಾಗದಲ್ಲಿ "ಉಳಿದವರು" ಎಂಬ ಪರಿಕಲ್ಪನೆಯು ಸತ್ಯವೇದದಲ್ಲಿ ಮೊಟ್ಟಮೊದಲಿಗೆ ಉಲ್ಲೇಖವಾಗಿರುವುದನ್ನು ಕಾಣುತ್ತೇವೆ. "ಉಳಿದುಬಿಟ್ಟಿದ್ದು" ಎಂಬುದಾಗಿ ಅನುವಾದಗೊಂಡಿರುವ ಈ ಪದದ ಮೂಲಾರ್ಥವು ಹಳೆಯ ಒಡಂಬಡಿಕೆಯಲ್ಲಿ ಅನೇಕ ಸಲ ಉಳಿಕೆ (ಶೇಷಭಾಗ) ಎಂಬ ಅರ್ಥವನ್ನು ಸೂಚಿಸುತ್ತವೆ.

"ನಿಮ್ಮ ಜನವು ಭೂಮಿಯ ಮೇಲೆ ಉಳಿಯುವಂತೆಯೂ ನೀವು ಈ ವಿಪತ್ತಿಗೆ ಸಿಕ್ಕದೆ ಬಹುಜನವಾಗುವಂತೆಯೂ ದೇವರು ನನ್ನನ್ನು ನಿಮ್ಮ ಮುಂದೆ ಕಳುಹಿಸಿದನು" (ಆದಿಕಾಂಡ 45:7).

"ಮತ್ತು ಚೀಯೋನಿನಲ್ಲಿ ಉಳಿದವರು, ಯೆರೂಸಲೇಮಿನಲ್ಲಿ ನಿಂತಿರುವರು, ಅಂತು ಜೀವಬಾಧ್ಯರ ಪಟ್ಟಿಯಲ್ಲಿ ಹೆಸರುಬಿದ್ದ ಯೆರೂಸಲೇಮಿನವರೆಲ್ಲರೂ ದೇವರ ಜನರೆನ್ನಿಸಿಕೊಳ್ಳುವರು" (ಯೆಶಾಯ 4:3).

ಆ ದಿನದಲ್ಲಿ ಕರ್ತನು ತನ್ನ ಜನಶೇಷವನ್ನು ಬಿಡಿಸಿಕೊಳ್ಳುವುದಕ್ಕೆ ಎರಡನೆಯ ಸಾರಿ ಕೈಹಾಕಿ... ಉಳಿದವರನ್ನು ಬರಮಾಡಿಕೊಳ್ಳುವನು (ಯೆಶಾಯ 11:11). ಮೇಲಿನ ಈ ಎಲ್ಲಾ ಸಂದರ್ಭಗಳಲ್ಲೂ ಅಡಿಗೆರೆ ಎಳೆದ ಪದಗಳು ಆದಿಕಾಂಡ 7:23ರಲ್ಲಿ "ಉಳಿದುಕೊಂಡವರು" ಎಂಬ ಪದಕ್ಕೆ ಸಂಬಂಧಪಡುತ್ತವೆ. ಜಲಪ್ರಳಯದ ಸಮಯದಲ್ಲಿ ಈ ಲೋಕದ ಸೃಷ್ಟಿಕರ್ತನಾಗಿರುವ ದೇವರ ನ್ಯಾಯಾಧಿಪತಿಯಾಗಿ ಬಂದನು. ಇಡೀಲೋಕಕ್ಕೆ ತೀರ್ಪುಮಾಡಿದಾಗ ಭೂಮಿಯ ಮೇಲಿರುವ ಎಲ್ಲಾ ಜಂತುಗಳು ಮನುಷ್ಯ ಪ್ರಾಣಿಯೂ ಸೇರಿ ನಾಶವಾಗಬೇಕೆ

ಎಂಬ ಪ್ರಶ್ನೆ ಎದ್ದಿತು. ಹಾಗಲ್ಲದಿದ್ದರೆ ಯಾರು ಬದುಕುಳಿದರು? ಯಾರು ಜನಶೇಷರು?

ಈ ಸಂದರ್ಭದಲ್ಲಿ ಹಾಗೆ ಉಳಿದವರು ನೋಹನು ಮತ್ತು ಅವನ ಕುಟುಂಬದವರು. ಆದಾಗ್ಯೂ ನೋಹನ ರಕ್ಷಣೆ ದೇವರು ಅವನೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಮೇಲೆ ಆಧಾರಗೊಂಡಿತ್ತು (ಆದಿಕಾಂಡ 6:18). ಈ ಒಡಂಬಡಿಕೆ ದೇವರ ಕರುಣೆ ಮತ್ತು ಕೃಪೆಯ ಮೂಲಕ ಸ್ಥಾಪನೆಗೊಂಡು ಕಾರ್ಯಗತವಾಯಿತು. ಅವರು ದೇವರೊಂದಿಗೆ ಯಾವುದೇ ಮಟ್ಟದಲ್ಲಿ ಸಹಕರಿಸಬಹುದು. ಆದರೆ ದೇವರ ದೆಸೆಯಿಂದ ಅವರು ಬದುಕುಳಿದರು. ಒಡಂಬಡಿಕೆಯ ಅನುಸಾರ ನೋಹನ ಕರ್ತವ್ಯ ಏನೇ ಆಗಿದ್ದರೂ ಮತ್ತು ಅದನ್ನು ಆತನು ಎಷ್ಟೇ ವಿಧೇಯಪೂರ್ವಕವಾಗಿ ನಿರ್ವಹಿಸಿದ್ದರೂ ಆತನ ಒಂದೇ ನಿರೀಕ್ಷೆ ದೇವರ ಕರುಣೆಯ ಮೇಲೆ ಆತುಕೊಳ್ಳುವುದಾಗಿತ್ತು.

"ಅಂತ್ಯಕಾಲದ ಘಟನೆಗಳ ಬಗ್ಗೆ ನಮಗಿರುವ ಜ್ಞಾನದ ಆಧಾರದ ಮೇಲೆ ದೇವರು ತನಗಾಗಿ ಉಳಿಸಿಕೊಂಡವರ (ಉಳಿದ ಸಭೆ) ಕಾಲವು ಯಾವಾಗ ಎಂಬ ಅರಿವಿನಿಂದ (ಪ್ರಕ 12:17) ಸಹ. "ಉಳಿದವರ" ಗುಂಪಿಗೆ ಸೇರುವ ಸಿದ್ಧತೆ ಮಾಡಿಕೊಳ್ಳುವಂತೆ ನೋಹನ ಕಥೆಯಲ್ಲಿ ನನಗೆ ಸಹಾಯಕವಾಗಿರುವ ಸಮಾನ ವಿಷಯಗಳು ಯಾವುವು? ನಾವು ಅಂಂತ್ಯಕಾಲದಲ್ಲಿ ಅಂತಿಮವಾಗಿ ನಾವು ತಲುಪುವ ಸ್ಥಿತಿಯ ಮೇಲೆ ಪರಿಣಾಮ ಬೀರುವಂತೆ ಪ್ರತಿನಿತ್ಯವೂ ಯಾವ ರೀತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದೇವೆ?

**ಶುಕ್ರವಾರ** **ಏಪ್ರಿಲ್ 16**

**ಹೆಚ್ಚಿನ ಚಿಂತನೆಗಾಗಿ:** ಶ್ರೀಮತಿ ಎಲೆನ್ ಜಿ ವೈಟಮ್ಮನವರ "ನಮ್ಮ ಪಿತೃಗಳು ಮತ್ತು ಪ್ರವಾದಿಗಳು" ಎಂಬ ಪುಸ್ತಕದಲ್ಲಿ "ಪ್ರಳಯ" ಮತ್ತು "ಪ್ರಳಯದ ನಂತರ" ಎಂಬ ಅಧ್ಯಾಯಗಳನ್ನು ಓದಿರಿ.

"ದೇವರು ಮತ್ತೊಮ್ಮೆ ಈ ಭೂಮಿಯನ್ನು ಎಂದೆಂದಿಗೂ ಜಲಪ್ರಳಯದಿಂದ ನಾಶಮಾಡುವುದಿಲ್ಲವೆಂದು ಮಾಡಿದ ಪ್ರತಿಜ್ಞೆಗೆ "ಮುಗಿಲುಬಿಲ್ಲು" ಪ್ರಾಕೃತಿಕವಾದ ವಿದ್ಯಮಾನವಾಗಿದ್ದು ಯೋಗ್ಯವಾದ (ಶ್ರೇಷ್ಠ) ಗುರುತಾಗಿದೆ. ಜಲಪ್ರಳಯವು

ಘಟಿಸದ ಮೇಲೆ ಭೂಮಿಯ ಹವಾಗುಣವು ಸಂಪೂರ್ಣವಾಗಿ ವ್ಯತ್ಯಾಸ ಹೊಂದಿತು, ಅದಕ್ಕೆ ಮೊದಲು ಇಬ್ಬನಿಯು ನೆಲವನ್ನು ತೋಯಿಸಿ ತೇವಗೊಳಿಸುತ್ತಿತ್ತು. ಈವಾಗ ಇದರ ಬದಲು ಭೂಮಿಯ ಎಲ್ಲಾ ಭಾಗದಲ್ಲಿ ಅಲ್ಲಲ್ಲಿ ಮಳೆ ಬೀಳುವಾಗಲೆಲ್ಲ ಮನುಷ್ಯರಿಗೆ ಆಗುವ ಭಯವನ್ನು ನಿವಾರಿಸುವಂತಹ ಯಾವುದಾದರೊಂದರ ಅಗತ್ಯವಿತ್ತು. ಆತ್ಮಭರಿತನಾದ ವ್ಯಕ್ತಿಯು ಪ್ರಾಕೃತಿಕ ವಿದ್ಯಮಾನಗಳಲ್ಲಿ ದೇವರ ಪ್ರಕಟನೆಗಳನ್ನು ಕಂಡುಕೊಳ್ಳುತ್ತಾನೆ (ರೋಮಾಪುರ 1:20ನ್ನು ನೋಡಿರಿ). ಒಬ್ಬ ವಿಶ್ವಾಸಿಯು ಮಳೆ ಬೀಳುವುದನ್ನು ನೋಡುವಾಗ "ಮುಗಿಲುಬಿಲ್ಲು" ಸರ್ವನಾಶವನ್ನು ತರದೆ ದೇವರ ಆಶೀರ್ವಾದಗಳನ್ನು ತರುತ್ತದೆ ಎಂಬುದಕ್ಕೆ ಪುರಾವೆಯಾಗಿದೆ".

# ಆರೋಗ್ಯದ ಲೇಖನಮಾಲೆ

## ಮೂರನೇ ವಾರ

## * ನೆಗಡಿ/ ಸಾಮಾನ್ಯಶೀತ

**ಸಾಮಾನ್ಯಶೀತ ಎಂದರೇನು?**

ಮೈಕೈ ನೋವು, ನೆಗಡಿ, ಜ್ವರಗಳಿಂದ ಕೂಡಿದ, ತೀವ್ರ ಸಾಂಕ್ರಾಮಿಕವಾದ ಒಂದು ವೈರಸ್ ರೋಗ.

**ಗುರುತಿಸುವುದು ಹೇಗೆ?**

ಮೊದಲು ಗಂಟಲು ಕಿರಿಕಿರಿಯಾಗುತ್ತದೆ, ನಂತರ ಮೂಗಿನಿಂದ ನೀರು ಸುರಿಯುವುದು, ಕೆಮ್ಮು, ಜ್ವರ, ಕೀಲುಗಳ ನೋವುಂಟಾಗುತ್ತದೆ. ಮಕ್ಕಳಲ್ಲಿ 7–10 ದಿನಗಳವರೆಗೆ ಸೌಮ್ಯವಾದ ಅತಿಸಾರ ಅಂದರೆ ಭೇದಿಯಾಗುತ್ತದೆ.

**ಕಾರಣವೇನು?**

ಸಾಮಾನ್ಯಶೀತ, ಕಠಿಣವಾದ ನೆಗಡಿ ಇರುವವರು ಸೀನಿದಾಗ ಅಥವಾ ಕೆಮ್ಮಿದಾಗ ರೋಗದ ವೈರಾಣುಗಳು ಇತರರಿಗೆ ಸೋಂಕುಂಟು ಮಾಡುತ್ತದೆ.

**ಏನು ಮಾಡಬೇಕು?**

1. ಔಷಧ ತೆಗೆದುಕೊಳ್ಳಬಾರದು.

2. ಹೆಚ್ಚಾಗಿ ಮಲಗಿ ವಿಶ್ರಾಂತಿ ತೆಗೆದುಕೊಳ್ಳಬೇಕು. ಸಿಹಿ ತಿಂಡಿ ತಿನ್ನಬಾರದು.
3. ಇತರರಿಂದ ದೂರವಿರಿ. ಕೆಮ್ಮುವಾಗ ಮತ್ತು ಸೀನುವಾಗ ಕರವಸ್ತ್ರದಿಂದ ಮೂಗನ್ನು ಮುಚ್ಚಿಕೊಳ್ಳಿ.
4. ಹಣ್ಣುಗಳು ಅದರಲ್ಲಿಯೂ 'ಸಿ' ಜೀವಸತ್ವ ಹೆಚ್ಚಾಗಿರುವ ಕಿತ್ತಳೆ ಮುಂತಾದವುಗಳನ್ನು ತಿನ್ನಿ.
5. ದಿನಕ್ಕೆ 4 ಲೀಟರ್ ನೀರು ಕುಡಿಯಿರಿ.
6. ನಲ್ಲಿ ನೀರಿನಲ್ಲಿ ತೆಳುಬಟ್ಟೆ ಒದ್ದೆ ಮಾಡಿ, ಮೂಗನ್ನು ಶುಚಿ ಮಾಡಿ.